1661 (2166) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕೇಂದ್ರ ಸರ್ಕಾರದ ಐ.ಡಿ.ಎಸ್.ಎಂ.ಟಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿರುವ ತಾಲ್ಲೂಕುಗಳು ಯಾವುವು (ತಾಲ್ಲೂಕುವಾರು, ವಿಧಾನ ಸಭಾ ಕ್ಷೇತ್ರವಾರು ಅದರ ಪ್ರಗತಿ ವಿವರಗಳನ್ನು ಒದಗಿಸುವುದು).

ಆ. ಯೋಜನೆಯಡಿಯಲ್ಲಿ ನಿರ್ಮಿಸಲಾದ ಕಾಮಗಾರಿಗಳಾವುವು (ವಿವರ ಒದಗಿಸುವುದು)

ಇ. ಇದಕ್ಕಾಗಿ ಖರ್ಚಾಗಿರುವ ಮೊತ್ತವೆಷ್ಟು.

ಈ. ಈ ಸಾಲಿನಲ್ಲಿಯೂ ಸಹ ಈ ಯೋಜನೆಯಡಿ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆಯೇ (ವಿವರ ನೀಡುವುದು)

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು):

ಅ. ಉತ್ತರ ಕನ್ನಡ ಜಿಲ್ಲೆಯಲ್ಲಿ ಐಡಿಎಸ್ಎಂಟಿ ಯೋಜನೆಯಡಿ ಕೆಳಕಂಡ ಪಟ್ಟಣಗಳನ್ನು ಆಯ್ಕೆ ಮಾಡಲಾಗಿದೆ.

1. ಸಿರಸಿ
2. ದಾಂಡೇಲಿ
3. ಕಾರವಾರ
4. ಹಳಿಯಾಳ
5. ಮುಂಡಗೋಡ
6. ಯಲ್ಲಾಪುರ
7. ಹೊನ್ನಾವರ
8. ಅಂಕೋಲಾ
9. ಕುಮಟಾ
10. ಸಿದ್ಧಾಪುರ

ಸದರಿ ಪಟ್ಟಣಗಳ ಪ್ರಗತಿ ವರದಿಯು ಕೆಳಕಂಡಂತಿದೆ

ಆ. ಈ ಯೋಜನೆಯಡಿ ನಿರ್ಮಿಸಿರುವ ಕಾಮಗಾರಿಗಳು ಕೆಳಕಂಡಂತಿವೆ.

(ಕಾಮಗಾರಿಗಳ ವಿವರ)		ವೆಚ್ಚ (ಲಕ್ಷಗಳಲ್ಲಿ)
1. ಸಿರಸಿ ನಗರಸಭೆ		
ಅ. ಮಾರುಕಟ್ಟೆ ನಿರ್ಮಾಣ ಕಾಮಗಾರಿ		11.79
ಆ. ರಸ್ತೆ ನಿರ್ಮಾಣ		6.45
ಇ. ಬೀದಿ ದೀಪ ಕಾಮಗಾರಿ		5.18
ಒಟ್ಟು		23.12
2. ದಾಂಡೇಲಿ ನಗರಸಭೆ		
ಅ. ಸಂತೆ ಮೈದಾನದಲ್ಲಿ ಮಾರುಕಟ್ಟೆ ನಿರ್ಮಾಣ	40.00	
ಆ. ರಸ್ತೆ ನಿರ್ಮಾಣ		7.00

ಇ. ಚರಂಡಿ ಕಾಮಗಾರಿಗಳು	3.79
ಈ. ರೆಸಿಡೆನ್ಸಿಯಲ್ ಲೇ ಔಟ್	41.54
ಒಟ್ಟು	92.33
3. ಕಾರವಾರ ನಗರಸಭೆ	
ಅ. ಮಾರುಕಟ್ಟೆ ನಿರ್ಮಾಣ ಕಾಮಗಾರಿ	31.50
ಆ. ರಸ್ತೆ ನಿರ್ಮಾಣ	7.16
ಇ. ಬೀದಿ ದೀಪ ಕಾಮಗಾರಿ	7.82
ಒಟ್ಟು	45.48

ಇದಲ್ಲದೇ ರೂ.52.00 ಲಕ್ಷಗಳ ವೆಚ್ಚದಲ್ಲಿ 2 ಮಾರುಕಟ್ಟೆ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

4. ಹಳಿಯಾಳ ಪಟ್ಟಣ ಪಂಚಾಯಿತಿ	
ಅ. ಮಾರುಕಟ್ಟೆ ನಿರ್ಮಾಣ ಕಾಮಗಾರಿ	0.34
ಆ. ರಸ್ತೆ ನಿರ್ಮಾಣ	19.63
ಒಟ್ಟು	19.97

5. ಯಲ್ಲಾಪುರ, ಹೊನ್ನಾವರ ಮತ್ತು ಅಂಕೋಲಾ ಪಟ್ಟಣಗಳಿಗೆ ದಿ. 18.2.2005 ರಂದು ಕೇಂದ್ರ ಸರ್ಕಾರದ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಕಾಮಗಾರಿಗಳು ಪ್ರಾರಂಭಗೊಳ್ಳುವ ಹಂತದಲ್ಲಿರುತ್ತದೆ. ಕುಮಟಾ ಪಟ್ಟಣದ ವರಿದಯು ಫೆಬ್ರವರಿ 2005ರಲ್ಲಿ ಮಂಜೂರಾಗಿದ್ದು, ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾಗಲು ಬಾಕಿ ಇರುತ್ತದೆ.

ಮುಂಡಗೋಡ ಮತ್ತು ಸಿದ್ದಾಪುರ ಪಟ್ಟಣಗಳ ಯೋಜನಾ ವರದಿಗಳು ಕೇಂದ್ರ ಸರ್ಕಾರದಿಂದ ಮಂಜೂರಾಗಬೇಕಾಗಿರುತ್ತದೆ.

ಇ. ಕಾಮಗಾರಿವಾರು ಖರ್ಚಾಗಿರುವ ಮೊತ್ತವನ್ನು ಮೇಲೆ ವಿವರಿಸಿದೆ.

ಈ. ಈ ಸಾಲಿನಲ್ಲಿ ಯಲ್ಲಾಪುರ, ಅಂಕೋಲಾ ಕುಮಟಾ ಮತ್ತು ಹೊನ್ನಾವರ ಪಟ್ಟಣಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

1662(2167) ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಣ್ಣ ಉಳಿತಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಬರಗಾಲದ ಬಗ್ಗೆ ಮಾಹಿತಿಯನ್ನು ಒದಗಿಸುವ ದಿಸೆಯಲ್ಲಿ ಬರ ಪರಿಹಾರ ಉಸ್ತುವಾರಿ ಕೋಶವು ಕೈಗೊಂಡ ಕ್ರಮಗಳೇನು;

ಆ. ಮಳೆಯ ಮಾಹಿತಿಯನ್ನು ಪಡೆಯಲು ಟೆಲಿಮೆಟ್ರಿಕ್ ಮಳೆ ಮಾಪನ ಉಪಕರಣವನ್ನು ಬರ ಪರಿಹಾರ ಉಸ್ತುವಾರಿ ಕೋಶವು ಅಭಿವೃದ್ದಿ ಪಡಿಸಿದೆಯೇ;

ಇ. ಹಾಗಿದ್ದಲ್ಲಿ, ಅದನ್ನು ಅಳವಡಿಸಿರುವುದು ಎಲ್ಲಿ (ವಿವರ ನೀಡಿ) :

ಈ. ಇದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು :

ಉ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಗ್ರಾಮಪಂಚಾಯಿತಿಗಳಲ್ಲಿ ಮಳೆ ಮಾಪಕ ಕೇಂದ್ರಗಳನ್ನು ಸ್ಥಾಪಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

ಊ. ಇದಕ್ಕೆ ಉಸ್ತುವಾರಿ ಕೋಶದಿಂದ ಪ್ರಸ್ತಾವನೆ ಬಂದಿದೆಯೇ;